**ಎಂ.ವಿ.ಸಿ.1582/2023**

**ಪಿಡಬ್ಲೂಃ 01**

**ಇಂದು ದಿಃ18.01.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಎಸ್.ಜೆ.ಡಿ ವಕೀಲರಿಂದಃ</u>**

ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ಅತ್ತಿಗೆ ಮಗ ಗುರುರಾಜ್ ಠಾಣೆಗೆ ದೂರು ಕೊಟ್ಟಿದ್ದಾನೆ. ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ನಿ.ಪಿ–4 ರ ಪ್ರಕಾರ ನನ್ನ ಯಜಮಾನರು ಬೆಟ್ಟದಪುರ ರಸ್ತೆಯಲ್ಲಿ ಬೈಸಿಕಲ್ ನಲ್ಲಿ ಹೋಗುತ್ತಿದ್ದಾಗ ಒಂದು ಬೈಕ್ ಬಂದು ಅಪಘಾತಪಡಿಸಿದೆ ಎಂದು ಬರೆದಿದೆ ಎಂದರೆ ಸರಿ. ನನ್ನ ಪರಿಹಾರದ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಅದೇ ರೀತಿ ಹೇಳಿದ್ದೇನೆ ಎಂದರೆ ಸರಿ. ಸ್ಥಳ ತನಿಖಾ ವರದಿ ಮತ್ತು ಮಹಜರ್ ನಲ್ಲಿ ಅದೇ ರೀತಿ ನಮೂದಾಗಿದೆ ಎಂದರೆ ಸರಿ. ಚಾರ್ಜ್ ಶೀಟ್ ಪ್ರಕಾರ ಮಲ್ಲೇಶ್ ಬಿನ್ ಲೇಟ್ ತಿಮ್ಮಯ್ಯ, ಚಿಕ್ಕೇಗೌಡ ಬಿನ್ ಲೇಟ್ ಮುರುಗೇಗೌಡ ಮತ್ತು ನನ್ನ ಯಜಮಾನರಾದ ಮಲ್ಲೇಶ 3 ಜನರು ಬೈಕಿನಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದು ನನ್ನ ಯಜಮಾನರು ಮೃತಪಟ್ಟಿರುವುದಾಗಿ ಬರೆಯಲಾಗಿದೆ ಎಂದರೆ ಸರಿ. ಅಪಘಾತವನ್ನು ನೋಡಿರುವರು ಯಾರು ಇಲ್ಲ. ಚಿಕ್ಕೇಗೌಡ ಮತ್ತು ಮಲ್ಲೇಶರವರಿಗೆ ಗಾಯಗಳಾಗಿಲ್ಲ. ಅಪಘಾತ ಪಡಿಸಿದ ವಾಹನದ ಸಂಖ್ಯೆಯನ್ನು ಪ್ರ.ವ.ವ ನಮೂದಿಸಿಲ್ಲದಿರುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಅದನ್ನು ಮರೆಮಾಚಿ ಚಾರ್ಜ್ ಶೀಟ್ ಸಲ್ಲಿಸುವ ಕಾಲಕ್ಕೆ 3 ಜನ ಬೈಕಿನಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದು ಅಪಘಾತವಾಗಿರುವುದಾಗಿ ಸುಳ್ಳು ಪ್ರತಿಬಿಂಬಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೊಡನೆ ಸೇರಿ ಸುಳ್ಳಾಗಿ 1ನೇ ಎದುರುದಾರರ ವಾಹನವನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಜನ ಮಕ್ಕಳು. ಅವರಲ್ಲಿ ಮಗನಿಗೆ 18 ವರ್ಷ ಮಗಳಿಗೆ 16 ವರ್ಷ. ಅವರಿಬ್ಬರನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ನನ್ನ ಯಜಮಾನರ ಆದಾಯ ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಆಧಾರ್ ಕಾರ್ಡ್ ಪ್ರಕಾರ ನನ್ನ ಯಜಮಾನರಿಗೆ 50 ವರ್ಷ ಆಗಿತ್ತು ಎಂದರೆ ಸರಿ. ಯಾವುದೋ ವಾಹನ ಅಪಘಾತಪಡಿಸಿ ಹೋಗಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**